ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ೨೧-೩-೧೯೮೦ ರವರೆಗೆ ಇಲ್ಲಿ ಉತ್ತರವನ್ನು ಕೊಡ ಲಾಗಿದೆ.

ಶ್ರೀ ಕೆ. ರಾಮಭಟ್.—ಮನೆಗಳನ್ನು ಹಂಚುವ ಜಿಲ್ಲಾ ವಸತಿಗೃಹ ವಿತರಣಾ ಸಮಿತಿಯಲ್ಲಿ ಯಾರು ಯಾರು ಸದಸ್ಯರಿದ್ದಾರೆ?

ಶ್ರೀ ಕಾಗೋಡು ತಿಮ್ಮಪ್ಪ.—ಜಿಲ್ಲಾಧಿಕಾರಿಗಳು, ಸ್ಥಳೀಯ ಎಕ್ಸಿಕ್ಯೂಟಿವ್ ಎಂಜಿನಿಯರ್ ಹಾಗೂ ಸೂಪರಿಂಡೆಂಡೆಂಟ್ ಆಫ್ ಪೋಲೀಸ್ ಇವರುಗಳು ಇರುತ್ತಾರೆ.

ಶ್ರೀ ಕೆ. ರಾಮಭಟ್.—ಇಲ್ಲಿ ಅಲಾಟ್‌ಮೆಂಟ್ ಮಾಡಿದ ಸಂಖ್ಯೆಯನ್ನು ಕೊಟ್ಟಿದ್ದೀರಿ. ಒಟ್ಟು ಎಷ್ಟು ಅರ್ಜಿಗಳು ಬಂದಿದ್ದವು ಎಂಬುದನ್ನು ಹೇಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ಮನೆಗಳನ್ನು ಒಂದು ದಿವಸದಲ್ಲಿಯೇ ಹಂಚಿದ್ದು ಅಲ್ಲ ಬಹಳ ದಿವಸಗಳಿಂದ ಇವುಗಳನ್ನು ಹಂಚುತ್ತಾ ಬರಲಾಗಿದೆ. ಇಲ್ಲಿ ಯಾವ ಯಾವ ಇಲಾಖೆಗಳಿಗೆ ಎಷ್ಟೆಷ್ಟು ವಸತಿ ಗೃಹಗಳು ಸೇರಿವೆ ಎಂಬುದನ್ನು ಹೇಳಿದ್ದೇನೆ. ಹಂಚಲು ಒಂದು ವರ್ಷ ಎರಡು ವರ್ಷ ಹಿಡಿಯುತ್ತದೆ, ವಸತಿಗೃಹ ಖಾಲಿಯಾದಾಗ ಅರ್ಜಿದಾರರಿಗೆ ಅದನ್ನು ಹಂಚಲಾಗುತ್ತದೆ.

ಶ್ರೀ ಕೆ. ರಾಮಭಟ್.—ಸರ್ಕಾರದಲ್ಲಿ ಬೇರೆ ಬೇರೆ ಇಲಾಖೆಗಳು ಉಂಟು. ಈ ಮನೆಗಳನ್ನು ಹಂಚುವ ವ್ಯವಸ್ಥೆ ಬೇರೆ ಬೇರೆ ಇಲಾಖೆಗಳ ಕೈಯ್ಯಲ್ಲಿ ಇದೆಯೇ?

ಶ್ರೀ ಕಾಗೋಡು ತಿಮ್ಮಪ್ಪ.—ಇದು ಬೇರೆಬೇರೆ ಇಲಾಖೆಯವರ ಕೈಯ್ಯಲ್ಲಿ ಇಲ್ಲ. ಒಬ್ಬರ ಹತ್ತಿರವೇ ಇದೆ. ಇದು ಪಿ.ಡಬ್ಲ್ಯೂ.ಡಿ. ಇಲಾಖೆಯ ಮೇಲ್ವಿಚಾರಣೆಯಲ್ಲಿದೆ. ಯಾವ ಮನೆ ಯಾವ ಇಲಾಖೆಗೆ ಸಂಬಂಧಪಟ್ಟ ಯಾರಿಗೆ ಕೊಡಬೇಕೆಂದು ಸಮಿತಿ ತೀರ್ಮಾನ ಮಾಡುತ್ತದೆ.

ಶ್ರೀ ಕೆ. ರಾಮಭಟ್.—ನಾನು ಈ ಪ್ರಶ್ನೆ ಕೇಳುವುದಕ್ಕೆ ಕಾರಣ ಏನೆಂದರೆ, ರೆವಿನ್ಯೂ ಇಲಾಖೆಯ ನೌಕರರಿಗೇ ಆದ್ಯತೆ ಕೊಟ್ಟು ಮನೆಗಳನ್ನು ಹಂಚಲಾಗುತ್ತಿದೆ ಎನ್ನುವ ಆಪಾದನೆ ಇದೆ. ಆದ್ದರಿಂದ ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಮನೆಗಳನ್ನು ಹಂಚಲಾಗಿದೆಯೆಂದು ಕೇಳಿದೆ. ಮನೆಗಳನ್ನು ಹಂಚುವ ಬಗ್ಗೆ ಹಿಂದಿನ ಐದು ವರ್ಷಗಳಲ್ಲಿ ೨೮ ಬಾರಿ ಸಭೆ ನಡೆದಿದೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ನಾಮಕಾವಸ್ತೆ ಸಭೆ ನಡೆಸಿ ರೆವೆನ್ಯೂ ಇಲಾಖೆಯ ನೌಕರರಿಗೆ ಆದ್ಯತೆ ನೀಡಿ ಮನೆಗಳನ್ನು ಹಂಚ ಲಾಗಿದೆಯೆಂಬ ಆಪಾದನೆ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ಈ ಸಮಿತಿಯಲ್ಲಿ ಜಿಲ್ಲಾಧಿಕಾರಿಗಳೇ ಇರುತ್ತಾರೆ. ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಹಾಗೂ ಎಕ್ಸಿಕ್ಯೂಟಿವ ಎಂಜಿನಿಯರ ಅವರು ಇರುತ್ತಾರೆ. ಇಡೀ ಜಿಲ್ಲಾ ಮೇಲ್ವಿಚಾರಕರಾದ ಜಿಲ್ಲಾಧಿಕಾರಿಗಳು ಇರಬೇಕಾದರೆ ಅವರು ಸ್ವಾಭಾವಿಕವಾಗಿ ಪ್ರಶ್ನೆ ಬಂದಾಗ ಅದನ್ನು ನೋಡಿಕೊಳ್ಳುತ್ತಾರೆ. ಅವರೇ ಇರುವಾಗ ಇಲ್ಲಿ ಅನ್ಯಾಯ್ಯ ಆಗಿದೆ ಎನ್ನುವ ಪ್ರಶ್ನೆ ಬರುವುದಿಲ್ಲ.

Collection of Beggar Tax in Hubli Dharwad.

50. SRI M. G. JARATARGAR (Hubli).—Will the Minister for Social Welfare and Backward Classes be pleased to state.—

(a) whether it has come to the notice of Government that the Hubli-Dharwad Metropolitan is collecting beggar tax from the citizens of the said City.

(b) If so, the amount of beggar tax collected for last four years.

(c) whether it has come to the notice of Government that the beggar menace has considerably increasing day by day in in said cities and thereby causing grave concern to the citizens.

(d) if so, the measures taken by Government so far, to avoid hardship caused to the citizens by the beggars?

SRI P. VENKATARAMANA (Minister for Social Welfare and Backward Classes.).—

(a) Yes.

(b) From the year 1976-77 to 1979-80 (i.e. from 1-9-1976)

(1) Amount collected Rs. 16,60, 911-80

(2) Expenditure towards collection Charges at 10%... Rs. 166492-70.

(3) Amount cridited to the account of Beggars Fund... Rs. 1494419-10

(c) No.

(d) Necessary action has been taken for opening beggars' residential home. It will be opened shortly.

ಶ್ರೀ ಕೆ. ರಾಮಭಟ್.—ಶ್ರೀ ಎಂ. ಜಿ. ಜರತಾರ್‌ಗರ್ ಪರವಾಗಿ ಹುಬ್ಬಳ್ಳಿ ಧಾರವಾಡ ನಗರ ಸಭೆಯ ವ್ಯಾಪ್ತಿಯಲ್ಲಿ ಬಿಕ್ಷುಕರ ಕರವನ್ನು ವಸೂಲು ಮಾಡಿದಂತ ಆಂಕಿ ಸಂಖ್ಯೆಗಳನ್ನು ತಪ್ಪು ಉತ್ತರ ದಲ್ಲಿ ಕೊಟ್ಟಿದ್ದೀರಿ. ಒಟ್ಟು ೧೬.೫೦ ಲಕ್ಷ ರೂಪಾಯಿಗಳನ್ನು ವಸೂಲು ಮಾಡಿ ಅದರಲ್ಲಿ ೧.೬೬ ಲಕ್ಷ ಖರ್ಚಾಗಿ ಉಳಿಕೆ ೧೪,೯೪,೪೧೬ ರೂಪಾಯಿ ಇದೆಯೆಂದು ಹೇಳಿದ್ದೀರಿ. ಇದು ಯಾವ ತಾರೀಖಿನ ವರೆಗೆ ವಸೂಲು ಮಾಡಿದ್ದು.

ಶ್ರೀ ಪಿ. ವೆಂಕಟರಮಣ.—೧-೯-೭೬ ರಿಂದ ೮೦ನೇ ಇಸವಿಯ ಮಾರ್ಚಿವರೆಗೆ ವಸೂಲು ಮಾಡಿದ್ದು.

ಶ್ರೀ ಕೆ. ರಾಮಭಟ್.—ಬಿಕ್ಷುಕರ ವಸತಿ ಗೃಹ ತೆರೆಯಲ್ಲಿಕ್ಕೆ ಅಗತ್ಯವಾದ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ ಏನೇನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಪಿ. ವೆಂಕಟರಮಣ.—ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡದಲ್ಲಿರುವ ಬೆಂಗಳೂರು ರಸ್ತೆಯಲ್ಲಿ ಒಂದು ಕಟ್ಟಡವನ್ನು ತಿಂಗಳೊಂದಕ್ಕೆ ೫೦೦ ರೂಪಾಯಿ ಬಾಡಿಗೆ ಆಧಾರದ ಮೇಲೆ, ಕೇಂದ್ರ ಪರಿಹಾರ ಸಮಿತಿಗೆ ಕೊಡಲು ಮಹಾನಗರ ಸಭೆ ಒಪ್ಪಿಕೊಂಡಿತ್ತು. ಈ ಕಟ್ಟಡವನ್ನು ಮಹಾನಗರ ಸಭೆ ವಾಪಸ್ಸು ಕೇಳಿದಾಗ ಕೊಡುವಂತ ನಿಬಂಧನೆ ಇತ್ತು. ಕಟ್ಟಡದ ರಿಪೇರಿಗಾಗಿ ೭೫,೦೦೦ ರೂಪಾಯಿ ಗಳನ್ನು ಕೇಂದ್ರ ಪರಿಹಾರ ಸಮಿತಿಯಿಂದ ಕೊಡುವಂತೆ ಆಗಿತ್ತು; ಆದರಂತೆ ಈಗ ಅಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಲಿಕ್ಕೆ ಪ್ರಯತ್ನ ಮಾಡಲಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜ್ಯದಲ್ಲಿ ಕಳೆದ ನಾಲ್ಕು ವರ್ಷದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಬಿಕ್ಷುಕರ ಕರದ ಲೆಕ್ಕದಲ್ಲಿ ವಸೂಲು ಮಾಡಲಾಗಿದೆ. ಬಿಕ್ಷುಕರ ಸಮಿತಿಯ ರಾಜ್ಯ ಮಟ್ಟದ ಅಧ್ಯಕ್ಷರು ಇದ್ದಾರೆಯೇ? ಸದಸ್ಯರು ಇದ್ದಾರೆಯೇ? ಎರಡನೆಯದು ಕಳೆದ ನಾಲ್ಕು ವರ್ಷದಲ್ಲಿ ಹುಬ್ಬಳ್ಳಿ ಧಾರವಾಡದಲ್ಲಿ ೧೬ ಲಕ್ಷ ರೂಪಾಯಿಗಳನ್ನು ವಸೂಲು ಮಾಡಿದ್ದರೂ ಕೂಡ ಒಬ್ಬ ಬಿಕ್ಷುಕನನ್ನು ಪುನರ್ವಸತಿ ಮಾಡುವಂತ ವ್ಯವಸ್ಥೆಯನ್ನಾಗಲೀ, ಉದ್ಯೋಗ ಕೊಡುವಂತ ವ್ಯವಸ್ಥೆಯನ್ನಾಗಲೀ ಮಾಡದೇ ಇರುವುದಕ್ಕೆ ಕಾರಣವೇನು?

ಶ್ರೀ ಪಿ. ವೆಂಕಟರಮಣ.—ಅಧ್ಯಕ್ಷರೇ, ಕೇಂದ್ರ ಸಮಿತಿಗೆ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರು ಅಧ್ಯಕ್ಷರಾಗಿರುತ್ತಾರೆ, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಸದಸ್ಯ ರಾಗಿರುತ್ತಾರೆ. ಇದರ ಬಗ್ಗೆ ಸುಗ್ರೀವಾಜ್ಞೆ ಕೂಡ ಇಷ್ಯೂ ಆಗಿ, ಇದೇ ಅಧಿವೇಶನದಲ್ಲಿ ಮಸೂದೆ ಕೂಡ ಬರುತ್ತದೆ. ಇದಕ್ಕೆ ಒಂದು ಸಮಿತಿ ಮಾಡಿ, ಕೂಡಲೇ ಕಟ್ಟಡವನ್ನು ಕಟ್ಟುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಶಾಮಣ್ಣನವರು ರಾಜೀನಾಮೆ ಕೊಟ್ಟ ಮೇಲೆ ಒಂದು ಭಾರಿಯೂ ಸಭೆ ನಡೆದಿಲ್ಲವೆಂದು ಕೇಳಿದ್ದೇನೆ. ಇದಕ್ಕೆ ಕಾರಣ ಏನು? ಎರಡು ವರ್ಷಗಳಿಂದ ತಡ ಮಾಡಲಿಕ್ಕೆ ಕಾರಣ ಏನು? ವಸೂಲು ಮಾಡಿದಂತ ಹಣವನ್ನು ಯಾವುದಕ್ಕೆ ಖರ್ಚು ಮಾಡಿದ್ದೀರಿ?

ಶ್ರೀ ಪಿ. ವೆಂಕಟರಮಣ.—ಆದಷ್ಟು ಜಾಗ್ರತೆ ಸಮಿತಿಯನ್ನು ಕರೆದು, ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ನಗರ ಸಭೆಯಲ್ಲಿ ಲಕ್ಷಾಂತರ ರೂಪಾಯಿ ವಸೂಲು ಮಾಡಿದರೂ ಬಿಕ್ಷುಕರ ಕಾಟ ಕಡಿಮೆಯಾಗಲಿಲ್ಲ. ಈ ದಿಸೆಯಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಪಿ. ವೆಂಕಟರಮಣ.—ಕ್ರಮ ತೆಗೆದುಕೊಳ್ಳುತ್ತೇನೆಂದು ಆಗಲೇ ಹೇಳಿದ್ದೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ವಸೂಲು ಮಾಡಿರತಕ್ಕ ಹಣವನ್ನು ಖರ್ಚು ಮಾಡದೇ ಇರುವುದಕ್ಕೆ ಕಾರಣವೇನು? ಬಿಕ್ಷುಕರ ಅನುಕೂಲಕ್ಕೋಸ್ಕರ ಹಾಕಿಕೊಂಡಿರತಕ್ಕ ಯೋಜನೆಗಳೇನು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಪಿ. ವೆಂಕಟರಮಣ.—ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದಷ್ಟು ಜಾಗ್ರತೆ ಬೇಕಾದಂತ ಅನುಕೂಲಗಳನ್ನು ಒದಗಿಸಿಕೊಡಲು ಸರ್ಕಾರ ಎಲ್ಲ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತದೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಪಿ. ರಾಂದೇವ್.—ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಬಿಕ್ಷುಕರ ಸಂಖ್ಯೆ ಜಾಸ್ತಿಯಾಗಿದೆ, ಬಿಕ್ಷುಕರ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ?

ಶ್ರೀ ಪಿ. ವೆಂಕಟರಮಣ.—ಆದಷ್ಟು ಜಾಗ್ರತೆ ಸಭೆಯನ್ನು ಕರೆದು, ಕಾರ್ಯಕ್ರಮಗಳನ್ನು ಹಾಕಿಕೊಂಡು, ತೀವ್ರವಾಗಿ ಕೆಲಸ ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಕೆ. ರಾಮಭಟ್.—ಶೀಘ್ರದಲ್ಲಿಯೇ ತೆರೆಯಲಾಗುವುದೆಂದು ಹೇಳಿದ್ದೀರಿ. ಶೀಘ್ರ ಅಂತ ಹೇಳುವುದಾದರೆ, ಎಷ್ಟು ಶೀಘ್ರ; ಯಾವ ತಾರೀಖಿನೊಳಗೆ ಮಾಡುತ್ತೀರೆಂಬುದನ್ನು ತಿಳಿಸುತ್ತೀರಾ?

ಅಧ್ಯಕ್ಷರು.—ಆ ಶಬ್ದಕ್ಕೆ ನಿಗದಿಯಾದ ಆಡ್ಡಿ ಇಲ್ಲ.

ಶ್ರೀ ಪಿ. ವೆಂಕಟರಮಣ.—ಸುಮಾರು ಒಂದೂವರೆ ಎರಡು ತಿಂಗಳಲ್ಲಿ ಮಾಡುತ್ತೇವೆ.

Construction of Karanja Irrigation Project.

462. SRI BHEEMANNA KANDRE (Bhalki).—Will the Minister of State for Major and Medium Irrigation be pleased to State:

(a) whether the Govt. is aware that Bidar Dist. is the most backward in the state without any Irrigation Projects;

(b) whether it is not a fact that every two years that the Dist, has been declared as famine effected area;

(c) whether the Karanja Irrigation Project estimating Rs. 58 crores was started in the year 1972 when the unprecedented drought was prevailing and the Govt. has promised many times on the floor of the House that the Project will be completed by 1982;

(d) the amount spent so far on this project (yearwise);

(e) whether it is not a fact that the Govt. has promised last year that 4 crores will be spent on this project;